ಮೂ. ದಾ. ನಂ. 69/2018

ಪಿ.ಡಬ್ಲ್ಯು.1

(ಇಂದು ದಿನಾಂಕ 16-12-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ**

ದಾವಾ ಸ್ವತ್ತು ಮೊದಲಿಗೆ ನನ್ನ ಮಾವ ರಾಮಚಂದ್ರ ಮಲ್ಲನ್ ರವರಿಗೆ ಸೇರಿದ್ದು, ಅವರ ಕಾಲಾನಂತರ ನಮಗೆ ಸೇರಿರುತ್ತದೆ. ಸಾಕ್ಷಿಯು ಮುಂದುವರೆದು ದಾವಾ ಸ್ವತ್ತಿನ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮಾಲೀಕರು ಯಾರು ಎಂಬುದನ್ನು ನಾನು ವಿಚಾರ ಮಾಡಿ ತಿಳಿದುಕೊಂಡಿರುವುದಿಲ್ಲ. ನಾನು ಸಾಕ್ಷ್ಯವನ್ನು 2 ನೇ ವಾದಿಯ ಪರವಾಗಿಯೂ ಸಹ ನುಡಿಯುತ್ತಿದ್ದೇನೆ.

ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ನಾನು ಮತ್ತು 2 ನೇ ವಾದಿ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ನಮ್ಮ ಮನೆಯಲ್ಲಿ ಇದ್ದ ವೈದ್ಯರು ನನ್ನ ಮೈದನು. ರಾಮಚಂದ್ರ ಮಲ್ಲನ್ ನನ್ನ ಮೈದುನನ ಮಗ. ನನ್ನ ಕುಟುಂಬದಲ್ಲಿ ಎಲ್ಲರು ಹೆಚ್ಚಿನ ವಿದ್ಯಾಭ್ಯಾಸ ಮಾಡಿದವರಾಗಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಮಾಲೀಕರು ಯಾರು ಎಂಬುದನ್ನು ಕುಟುಂಬದ ಸದಸ್ಯರೊಂದಿಗೆ ಚರ್ಚಿಸಿ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ.

ನನ್ನ ಗಂಡ ಜೀವಂತ ಇರುವ ಸಂದರ್ಭದಲ್ಲಿ ಅವರ ಪರವಾಗಿ ನಾನು ಭೂ ನ್ಯಾಯಮಂಡಳಿದುಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಹಾಜರಾಗಿದ್ದೆನು ಎಂದರೆ ಸರಿ. ನಾನು ಜಿಲ್ಲಾಧಿಕಾರಿಗಳ ಸಮಕ್ಷಮ ಇದ್ದಂತಹ ಪ್ರಕಣದಲ್ಲಿಯೂ ಸಹ ಹಾಜರಾಗಿದ್ದೆನು ಎಂದರೆ ಸರಿ.  ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ನಾನು ಸಲ್ಲಿಸಿದಂತಹ ಅರ್ಜಿ ತಿರಸ್ಕಾರಗೊಂಡಿದ್ದು, ಅದರ ವಿರುದ್ದ ನಾನು ಮೇಲ್ಮನವಿಯನ್ನು ಸಲ್ಲಿಸಿದ್ದೆನು ಎಂದರೆ ಸರಿ. ಮಾನ್ಯ ಕೆ ಎ ಟಿ ಯಲ್ಲಿ ನಾನು ಸಲ್ಲಿಸಿದ ಮೇಲ್ಮನವಿಯು ವಜಾ ಆಗಿದ್ದು, ಅದರ ವಿರುದ್ಧ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಜಿಲ್ಲಾಕಾರಿಗಳ

ನ್ಯಾಯಾಲಯ, ಕೆ ಎ ಟಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾದಂತಹ ಅರ್ಜಿಗಳು ಭೂನ್ಯಾಯ ಮಂಡಳಿಯ ಆದೇಶಕ್ಕೆ ಸಂಬಂಧಪಟ್ಟಂತೆ ಆಗಿರುತ್ತದೆ ಎಂದರೆ ಸರಿ. ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿಯ ಪ್ರತಿ ನನ್ನ ಬಳಿ ಇದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಾನು ಸಲ್ಲಿಸಿರುವ ರಿಟ್ ಅರ್ಜಿಯಲ್ಲಿ ದಾವಾ ಸ್ವತ್ತಿನ ಮಾಲೀಕರು ಯಾರು ಎಂದು ನಮೂದಿಸಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮಾನ್ಯ ಜಿಲ್ಲಾಕಾರಿಗಳ ನ್ಯಾಯಾಲಯ, ಮಾನ್ಯ ಕೆ ಎ ಟಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿಗಳ ಪ್ರತಿ ನನ್ನ ಬಳಿ ಇದೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ